ಮಾಡುತ್ತೇನೆ.

ಊ) ದ.ಕ. ಜಿಲ್ಲೆಯಲ್ಲಿ ಸರ್ವೆ ಕಾರ್ಯ.

ಶ್ರೀ ಎನ್.ಯೋಗೀಶ್ ಭಟ್ (ಮಂಗಳೂರು): ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಕಾನ, ಬಾನ, ಕುಮ್ಕಿ ಅರಣ್ಯ ಪ್ರದೇಶಗಳಿವೆ ಎಂದು ಸರ್ಕಾರಕ್ಕೆ ತಿಳಿದಿದೆಯೇ ಎಂಬ ಪ್ರಶ್ನೆಯನ್ನು ಚರ್ಚೆಯ ಸಂದರ್ಭದಲ್ಲಿ ಕೇಳಬೇಕೆಂದಿದ್ದೆ. ಆದರೆ ಅವಕಾಶವಾಗಲಿಲ್ಲ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಲ್ಯಾಂಡ್ ರೆಕಾರ್ಡ್ಸ್‌ನಲ್ಲಿ ಸರ್ವೆ ದಾಖಲಾತಿಗಳು ಇಲ್ಲ. ಸುಮಾರು 50 ವರ್ಷಗಳಾಯಿತು, ಸರಿಯಾಗಿ ಸರ್ವೆ ಆಗದೆ ಅನೇಕ ವ್ಯಾಜ್ಯಗಳು ಈ ಸಂಬಂಧಪಟ್ಟ ಹಾಗೆ ನಡೆಯುತ್ತಿವೆ. ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಕಂದಾಯ ಮಂತ್ರಿಗಳನ್ನು ವಿನಂತಿಸುತ್ತಿದ್ದೇನೆ. ತಾವು ದಯವಿಟ್ಟು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಂಬಂಧಪಟ್ಟ ಗ್ರಾಮದಲ್ಲಿರತಕ್ಕ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಈ ತರಹ ಸರ್ವೆ ಕಾರ್ಯವನ್ನು ನಡೆಸುವಂಥ ಕ್ರಮ ತೆಗೆದುಕೊಳ್ಳಬೇಕು. ಯಾವಾಗ ಆ ಕ್ರಮ ತೆಗೆದುಕೊಳ್ಳುತ್ತೀರೆಂಬುದನ್ನು ತಿಳಿಸಬೇಕೆಂದು ವಿನಂತಿ ಮಾಡುತ್ತಿದ್ದೇನೆ.

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ಜಂಟಿ ಸರ್ವೆಯನ್ನು ಬಹಳ ಎಚ್ಚರಿಕೆಯಿಂದ ಮಾಡಬೇಕು. ಏಕೆಂದರೆ ಜಂಟಿ ಸರ್ವೆ ಮಾಡುವಾಗ ಸಾರ್ವಜನಿಕರನ್ನು ಜೊತೆಯಲ್ಲಿಟ್ಟುಕೊಂಡು ನಮ್ಮ ಕಂದಾಯ ಇಲಾಖೆ ಮತ್ತು ಸರ್ವೆ ಇಲಾಖೆ ಎರಡೂ ಸೇರಿಕೊಂಡು ಮಾಡಬೇಕಾಗುತ್ತದೆ ಮತ್ತು ಬಹಳ ಎಚ್ಚರಿಕೆಯಿಂದ ಮಾಡಬೇಕಾಗುತ್ತದೆ. ಅದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಋ) ಮಂಗಳೂರು ಮಹಾನಗರಪಾಲಿಕೆಯ ತ್ಯಾಜ್ಯ ವಸ್ತುಗಳನ್ನು ಎಟ್ಲ ಕ್ಷೇತ್ರದಲ್ಲಿ ಹಾಕಲು ವಿರೋಧ.

ಶ್ರೀ ಎ.ರುಕ್ಮಯ್ಯ ಪೂಜಾರಿ (ವಿಟ್ಲ): ಮಾನ್ಯ ಅಧ್ಯಕ್ಷರೆ, ಮಂಗಳೂರು ಮಹಾನಗರ ಪಾಲಿಕೆ ಪ್ರದೇಶದೊಳಗಿನ ತ್ಯಾಜ್ಯ ವಸ್ತುಗಳನ್ನು ಮಂಗಳೂರು ತಾಲ್ಲೂಕಿನ ವಾಮಂಜೂರು ಎಂಬಲ್ಲಿ ರಾಶಿ ಹಾಕುವ ವ್ಯವಸ್ಥೆ ಬಹಳ ಹಿಂದಿನಿಂದ ನಡೆದುಕೊಂಡು ಬಂದಿದೆ. ಆದರೆ ಇತ್ತೀಚೆಗೆ ಅದನ್ನು ಅಲ್ಲಿಂದ ತೆಗೆದು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಮುಡುಪಿನ ಬಾಳೆಗುಣಿ ಗ್ರಾಮದ ಕರಡಿಪಾಳ್ಯ ಎಂಬಲ್ಲಿ ಹಾಕುವುದಕ್ಕೆ ಬೇಕಾದ ವ್ಯವಸ್ಥೆಯನ್ನು ಮಾಡುವುದಕ್ಕೆ ಡಿ.ಸಿ.ಯವರು ಪ್ರಯತ್ನ ಮಾಡಿದರು. ಮತ್ತು ಇದಕ್ಕೋಸ್ಕರ ಹತ್ತು ಎಕರೆ ಜಾಗವನ್ನು ಕಾಯ್ದಿರಿಸಿದ್ದಾರೆ. ಊರಿನ ಜನರು ಅದನ್ನು ವಿರೋಧ ಮಾಡಿದರು. ನಾನು ಜಿಲ್ಲಾಧಿಕಾರಿಗಳ ಜೊತೆ ಮಾತನಾಡಿ ವಿರೋಧಿಸಿದಾಗ ಆ ಪ್ರಸ್ತಾವನೆಯನ್ನು ಕೈಬಿಡುತ್ತೇವೆಂದು ಭರವಸೆ ಕೊಟ್ಟಿದ್ದಾರೆ. ನಂತರ ನಮ್ಮ ಗಮನಕ್ಕೆ ಬಾರದೆ ಈಗ ಅಲ್ಲಿ ಹತ್ತು ಎಕರೆ ಜಮೀನನ್ನು ತ್ಯಾಜ್ಯ ವಸ್ತುಗಳನ್ನು ರಾಶಿ ಹಾಕುವುದಕ್ಕಾಗಿ

ಅದಕ್ಕೆ ಆರ್.ಟಿ.ಸಿ. ಕೂಡ ಬದಲಾವಣೆ ಮಾಡಿದ್ದು ನನ್ನ ಗಮನಕ್ಕೆ ಬಂದಿದೆ. ಆ ಒಂದು ರಾಶಿ ಹಾಕತಕ್ಕ ಪ್ರದೇಶದ ಆಸುಪಾಸಿನಲ್ಲಿ ಶಾಲೆ ಇದೆ, ವಸತಿಗಳು ಇವೆ, ಪೂಜಾಮಂದಿರ ಇದೆ, ವ್ಯಾಪಾರ ಕೇಂದ್ರ ಇದೆ. ಇಂಥ ಪ್ರದೇಶದಲ್ಲಿ ತ್ಯಾಜ್ಯ ವಸ್ತುಗಳನ್ನು ಹಾಕುವುದು ಖಂಡನೀಯ. ಇದನ್ನು ಮುಂದುವರಿಸಿದರೆ ಊರಿನವರು ವಿರೋಧ ಮಾಡುವ ಮಟ್ಟಕ್ಕೆ ಬಂದಿದ್ದಾರೆ. ಅಲ್ಲಿ ರಾಶಿ ಹಾಕಿದರೆ ದುರ್ನಾಥ ಉಂಟಾಗಿ ಆರೋಗ್ಯ ಕೆಡುವ ಪರಿಸ್ಥಿತಿ ನಿರ್ಮಾಣವಾಗಬಹುದು. ಅದಕ್ಕಾಗಿ ತಕ್ಷಣವೇ ಆ ವ್ಯವಸ್ಥೆಯನ್ನು ಕೈಬಿಡಬೇಕು. ತ್ಯಾಜ್ಯ ವಸ್ತುಗಳನ್ನು ಅಲ್ಲಿ ಹಾಕಬಾರದೆಂದು ಸರ್ಕಾರವನ್ನು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಬಿ.ಎನ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ತಿಳಿಸಿರುವ ಪ್ರಕಾರ ಮಂಗಳೂರು ನಗರ ಪಾಲಿಕೆಯಲ್ಲಿ ತ್ಯಾಜ್ಯ ವಸ್ತುಗಳನ್ನು ವಾಮಂಜೂರು ಎಂಬಲ್ಲಿ ರಾಶಿ ಹಾಕುವ ವ್ಯವಸ್ಥೆ ಇದೆ. ಅಲ್ಲಿ ಸಾಕಷ್ಟು ಜಮೀನು ಇದೆ ಎಂದು ತಿಳಿಸಿದ್ದಾರೆ. ಹಿಂದಿನಿಂದ ಅಲ್ಲಿ ರಾಶಿ ಹಾಕಿಕೊಂಡು ಬರುತ್ತಿದ್ದಾರೆ. ನಮ್ಮ ಶಾಸಕರ ಕ್ಷೇತ್ರವಾದ ಕರಡಿಪಾಳ್ಯ ಎಂಬಲ್ಲಿ ಮತ್ತೆ ಹತ್ತು ಎಕರೆ ಜಾಗ ತೆಗೆದುಕೊಂಡು ಆರ್.ಟಿ.ಸಿ.ಯಲ್ಲಿ ಎಂಟ್ರೀಸ್ ಹಾಕಿ ಅಲ್ಲಿ ಮಾಡಿದರೆ ಪಲ್ಯೂಷನ್ ಆಗುತ್ತದೆ, ಅಲ್ಲಿ ಮಾಡಕೂಡದೆಂದು ತಿಳಿಸಿದ್ದಾರೆ. ಈ ಬಗ್ಗೆ ಅಲ್ಲಿನ ಜಿಲ್ಲಾಧಿಕಾರಿಗಳ ಹತ್ತಿರ ಕೂಡ ಮಾತನಾಡಿದ್ದೇನೆಂದು ಹೇಳಿದ್ದಾರೆ. ನಾನು ಅವರ ಹತ್ತಿರ ಮಾತನಾಡಿ ಅವರು ಏನು ಶಾಸಕರಿಗೆ ಮತ್ತು ಸಾರ್ವಜನಿಕರಿಗೆ ತಿಳಿಸಿದ್ದಾರೆಂಬುದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಖಖ) ಮಂಗಳೂರು ತಾಲ್ಲೂಕು ಪಂಚಾಯಿತಿ ಕ್ಷೇತ್ರದಲ್ಲಿ ಶೌಚಾಲಯ ನಿರ್ಮಾಣದಲ್ಲಿ ಆಗಿದೆ ಎನ್ನಲಾದ ಅವ್ಯವಹಾರಗಳು.

ಶ್ರೀ ಕೆ.ಜಯರಾಮಶೆಟ್ಟಿ (ಉಳ್ಳಾಲ): ಮಾನ್ಯ ಅಧ್ಯಕ್ಷರೆ, ಮಂಗಳೂರು ತಾಲ್ಲೂಕು ಪಂಚಾಯಿತಿ ಕ್ಷೇತ್ರದಲ್ಲಿ 46 ಗ್ರಾಮ ಪಂಚಾಯಿತಿಗಳು ಬರುತ್ತವೆ. ಇತ್ತೀಚೆಗೆ ಒಂದು ಗ್ರಾಮ ಪಂಚಾಯಿತಿಗೆ ನೂರು ಶೌಚಾಲಯಗಳನ್ನು ಒದಗಿಸಿದ್ದಾರೆ. ಆದರೆ ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿಗಳ ಜವಾಬ್ದಾರಿಯಲ್ಲಿ ಸುಮಾರು 600 ಶೌಚಾಲಯಗಳಲ್ಲಿ 60 ಜನರಿಗೆ 1600ರಂತೆ, 40 ಜನರಿಗೆ 1200ರ ಹಾಗೆ ಅದನ್ನು ಬದಲಾವಣೆ ಮಾಡಿಕೊಂಡು ಅದರ ಎಲ್ಲಾ ಹಣವನ್ನು ನಗದೀಕರಣ ಮಾಡಿಕೊಂಡು ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳಿಗೆ ಕಳುಹಿಸಿಕೊಟ್ಟಿದ್ದಾರೆ. ಕಾನೂನಿನ ಪ್ರಕಾರ ಅದನ್ನು ಚೆಕ್ ಮೂಲಕ ವಿತರಿಸಬೇಕಾಗಿತ್ತು. ಆದರೆ ಹಾಗೆ ಮಾಡದೆ ಹಣವನ್ನು ಕೈಯಲ್ಲಿಟ್ಟುಕೊಂಡು 1600ಕ್ಕೆ ದಸ್ಕತ್ತು ತೆಗೆದುಕೊಂಡು 1200 ಕೆಲವರಿಗೆ ಕೊಟ್ಟಿದ್ದಾರೆ. ಇನ್ನು ಕೆಲವು ಕಡೆ ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳಿಗೆ ಕೊಟ್ಟದ್ದು, ಯಾರಿಗೆ ಎಷ್ಟು ಕೊಟ್ಟಿದ್ದಾರೆ, ಎಂಥದ್ದು ಕೊಟ್ಟಿದ್ದಾರೆಂದು ಗೊತ್ತಿಲ್ಲ. ಸುಮಾರು 10 ಲಕ್ಷ